ಕೆಲಸಗಳಲ್ಲಿ ತೊಡಗಿದಾಗ ಅಪರೂಪಕ್ಕೆ ಇಂಥ ಕ್ಷಣಗಳು ನನಗಂತೂ ಒದಗಿವೆ; ನಮ್ಮೂರಿನ ಕೃಷಿಕಾರ್ಯದಲ್ಲಿ ತೊಡಗಿರುವ ನನ್ನ ಹಲವು ಮಿತ್ರರು ತಮ್ಮ ಕೆಲಸಗಳಲ್ಲಿ ಇಂಥ ತಾತ್ಕಾಲಿಕ–ತುರೀಯವನ್ನು ಅನುಭವಿಸುವುದೂ ನನ್ನ ಗಮನಕ್ಕೆ ಬಂದಿದೆ. ಕಾಲದೇಶಗಳಲ್ಲಿ ಇದ್ದೂ ಕಾಲದೇಶಗಳನ್ನು ಸಂಪೂರ್ಣವಾಗಿ ಮರೆಯುವ ಇಂಥ ತಾತ್ಕಾಲಿಕ ಅವಸ್ಥೆಯನ್ನು ಕುರಿತು ನಿದ್ದೆ ಬಾರದ ವೇಳೆ ಯೋಚಿಸುತ್ತಿರುವಾಗ ನನಗೆ, ಇದನ್ನು 'ಲೌಕಿಕ–ತುರೀಯ'ವೆಂಬ ಹೊಸ ಹೆಸರಲ್ಲಿ ಕರೆಯಬಹುದೆಂದೂ ಕಂಡಿದೆ.

ಈಚೆಗೆ ನಾನು ಓದುತ್ತಿರುವ – ಮತ್ತು ನನ್ನ ಅಂಥ ಓದು ಇನ್ನಷ್ಟು ಗಾಢವಾಗಲಿ ಎಂಬ ಕಾರಣಕ್ಕಾಗಿ ಅದನ್ನು ಕನ್ನಡೀಕರಿಸಲು ಒದ್ದಾಡುತ್ತಿರುವ – ಭವಭೂತಿಯ 'ಉತ್ತರರಾಮಚರಿತ'ದಲ್ಲಿ ಅದಕ್ಕೊಂದು ಪುರಾವೆಯೂ ನನಗೆ ದೊರಕಿದೆ. ಈ ಬರಹದ ಆರಂಭದಲ್ಲಿ ಉಲ್ಲೇಖಿಸಿದಂತೆ, ರಾಮಸೀತೆಯರು ಆ ನಾಟಕದಲ್ಲಿ ಗತಕಾಲದ ಚಿತ್ರಗಳನ್ನು ನೋಡುತ್ತ ತಮ್ಮ ವನವಾಸದ ಅನುಭವವನ್ನು ಪುನರ್‌ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಗಂಡಹೆಂಡಿರ ನಡುವಿನ ಸಂಬಂಧದ ಅಂಥ ಒಂದು ಉತ್ಕಟ ಕ್ಷಣವನ್ನು ಅನುಭವಿಸುವ ರಾಮನಿಗೆ, ಆಗ ಹಠಾತ್ತಾಗಿ ನಿದ್ದೆ–ಎಚ್ಚರ–ಕನಸುಗಳೆಲ್ಲ ಕೂಡಿದ ಒಂದು ಲೌಕಿಕ–ತುರೀಯದ ಅನುಭವವಾಗುತ್ತದೆ; ಭೂತ–ವರ್ತಮಾನ–ಭವಿಷ್ಯಗಳೆಲ್ಲ ಮೇಳೈಸಿದ ಸಾರ್ವತ್ರಿಕ ಕಾಲದ ಅನುಭವವು ತತ್ಕಾಲದ ಒಳಗೇ ಆಗುತ್ತದೆ; ಲೌಕಿಕ ಜಂಜಡಗಳಿಂದ ಮುಕ್ತವಾದ ದಿವ್ಯಪ್ರೇಮದ ಸಾಕ್ಷಾತ್ಕಾರವು ಸಂಸಾರದ ನಡುವೆಯೇ ಸಂಭವಿಸುತ್ತದೆ. ಅಂಥ ಅನುಭವವನ್ನು ಆತ ನಿವೇದಿಸುವ ಈ ಪದ್ಯವನ್ನು ಬೇಕಿದ್ದರೆ ಈ ಬರಹಕ್ಕೆ ಭರತವಾಕ್ಯವೆಂದು ಭಾವಿಸಬಹುದು:

ಸುಖದುಃಖವೆಂಬೆರಡು ಎರಡಲ್ಲವೆಂಬರಿವು
ನಿದ್ರೆ ಎಚ್ಚರ ಕನಸು ಹದವರಿತ ಮನದಿರವು
ಹೃದಯಾಂತರಾಳದಲಿ ನೆಮ್ಮದಿಯ ವಿಶ್ರಾಂತಿ
ಮುದಿಹರಯದೊಳಗು ಸಹ ಮಾಸದಿಹ ಸುಖಶಾಂತಿ
ಸಮಯ ಕಳೆದರು ಕೂಡ ಸವೆದು ಹೋಗದ ಬಂಧ
ಸವೆಯದೆಯೆ ಉಳಿವಂಥ ಗೆಳೆತನದ ಸಂಬಂಧ
– ಇಂಥ ಫಲಗಳ ಪಡೆದ ಮನುಜನೇ ಧನ್ಯ
ಪ್ರೇಮವೆಂದರೆ ಅದೇ, ಅದುವೆ ಮಾನ್ಯ! (ಅಂಕ 1, ಪದ್ಯ 39)

---

## ಕೆ.ವಿ. ಅಕ್ಷರ

ಲೇಖಕ, ರಂಗಕರ್ಮಿ ಅಕ್ಷರ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡಿನವರು. ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ(ಎನ್‌ಎಸ್‌ಡಿ)ಯಿಂದ ಪದವಿ ಮತ್ತು ಇಂಗ್ಲೆಂಡಿನ ಲೀಡ್ಸ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ತಂದೆ ಕೆ.ವಿ. ಸುಬ್ಬಣ್ಣ ಅವರು ಸ್ಥಾಪಿಸಿದ ರಂಗಸಂಸ್ಥೆ 'ನೀನಾಸಂ'(ನೀಲಕಂಠೇಶ್ವರ ನಾಟ್ಯಸೇವಾ ಸಂಘ) ಮತ್ತು 'ಅಕ್ಷರ ಪ್ರಕಾಶನ'ವನ್ನು ಪ್ರಸ್ತುತ ಅಕ್ಷರ ಅವರು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. 'ಮಾವಿನ ಮರದಲ್ಲಿ ಬಾಳೆಯ ಹಣ್ಣು', 'ರಂಗಭೂಮಿ ಮುಖಾಂತರ', 'ರಂಗ ಪ್ರಯೋಗ', 'ಸಹ್ಯಾದ್ರಿ ಕಾಂಡ', 'ರಂಗ ಪ್ರಪಂಚ', 'ಸಮ್ಮುಖದಲ್ಲಿ ಸ್ವಗತ', 'ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ' ಅವರ ಕೆಲವು ಪುಸ್ತಕಗಳು. 'ಹದಿ ಹರೆಯದ ಹಾಡು' ಅವರ ಕವಿತೆಗಳ ಸಂಗ್ರಹವಾಗಿದೆ.